ತಾಯಿನ ಜರಾ ನೋಡ್ರೀ...'

ನೋಡ್ಲಿಕ್ಕೆ ಛಲೊ ಗರತಿ ಗಂಗಮ್ಮನ ಹಂಗಿದಾಳ...! ಮಾಡಿರೋದು ಸೂಳೀ ಕೆಲ್ಸ...! ಧೈರ್ಯವಾಗಿ ಕೂಸನ್ನ ಒಬ್ಬೆ ಸಾಕ್ತಿದಾಳಲ್ಲ... ರಂಡೀ ಇವ್ಳಿಗೆ ಏನನ್ನೋಣ ಹೇಳ್ರೀ...' ಅವರು ಬಂಗಲೇ ದಾಟಿಯಾಗಿತ್ತು ಪ್ರಸಾದ ನೆಲ ನೋಡುತ್ತ ಉಸುರಿದ, 'ಏನೋ... ಪಾಪದೋಳು... ಒಳೊಳಗೇ ಅದೇನು ಯಾತನೆ ಅನುಭವಿಸ್ತಾ ಇದಾಳೇ ಏನೋ...?'

'ಅನುಭವಿಸ್ಲಿ ಬಿಡ್ರಲ್ಲಾ...! ಈ ಪೋರಿಗೆ ಗಂಟಲ ಬಾಧೆ ತಡೀಲಿಕ್ ಆಗದಿದ್ದಾಗ ನನ್ನ ಬಳಿ ಓಡೋಡಿ ಬಂದು ಔಷಧಿ ಬೇಡದ್ಳು... ಕೂಸಿಗೆ ಜಡ್ಡಾದ ಮ್ಯಾಗೆ ಕೆಲ್ಸಕ್ಕೆ ಹೋಗಾದೂ ಬಿಟ್ಲು... ನಂಗೂ ಇವ್ಳನ್ನ ಕಂಡ್ರೆ ಒಮ್ಮೊಮ್ಮೆ ಪಾಪ ಅನ್ಸತ್ತೆ... ಈಕಿ... ಆ ಮಿಂಡನ ಹೆಸ್ರನ್ನ ಬೀದಿಗೆ ಬರೂ ಹಾಂಗ ಮಾಡ್ಬೇಕಿತ್ರೀ... ಅಷ್ಟಿಂದ ಇವ್ಳಿಗೆ ಈ ಪಾಡು... ಇಬ್ರೂ ಮಾಡಿದ ಪಾಪದ ಕಾರ್ಯಕ್ಕೆ ಇವ್ಳೊಬ್ಳೇ ಸಿಕ್ಕೆ ಅನುಭೋಗಿಸ್ತಿದಾಳೆ... ಅಂವ ಕಳಚಿಕೊಂಡು ಬಿಟ್ಟ...! ನೀವೇ ಹೇಳ್ರೀ... ಇದ್ದು ಅನ್ಯಾಯ ಅಲ್ವೇನ್ರಿ...?'

ಪ್ರಸಾದನಿಗೆ ಅವನ ಮಾತುಗಳು ಯಾಕೊ ಮುಜುಗರ ಉಂಟು ಮಾಡಿತು.

'ಶಿವಣ್ಣ... ನಂಗ್ಯಾಕೊ ಆಯಾಸ ಆಗ್ತಿದೆ... ವಾಪಸ್ಸು ಮನೆಗೆ ಹೋಗಿ ಮಲಗ್ತೀನಿ...'

'ನಾನೂ ನಿಮ್ಮನ್ನ ನೋಡ್ತಾನೇ ಇರ್ತೀನ್ರಿ... ಬಾಳ ಸೋತು ಹೋದ್ರಿ... ನನ್ನ ದವಾಲಿ ನಂಬಿಕೆ ಇರದಿದ್ರ ಬೇರೆ ಯಾರಾದ್ರೂ ಡಾಕ್ಟರಿಗಾದ್ರೂ ತೋರಸ್ರೀ... ನಿಮ್ಮ ತಲೆಯಾಗ ಅದೇನೊ ಚಿಂತಿ ಐತಿ. ಚಿಂತಿನೇ ಮನುಷ್ಯನನ್ನ ಚಿತೀ ಬಳಿ ಒಯ್ಯಾದು ಅಂತಾರ... ನನಗೆ ನಿಮ್ಮ ಜಡ್ಡು ತಿಳೀತದೆ, ಆದ್ರೆ ತಿಳಿದಿದೆ ಅಂತ ಹೇಳೂಕೂ ನಂಗೆ ಬರೂದಿಲ್ಲ...!'

'ಏನೊ ಒಗಟಾಗಿ ಮಾತಾಡ್ತೀಯಲ್ಲಪ್ಪಾ...!'

'ನೀವೇ ಸೀದಾಸೀದ ಇರದಿದ್ದ ಮ್ಯಾಲೆ... ನಾನೂ ಒಗಟು ಹಾಕೇ ಮಾತಾಡ್ಲಿಕ್ಕೆ ಹತ್ತೀನಿ... ಇನ್ನೆಂಗ ಮಾತಾಡ್ಲಿಕ್ಕೆ ಬರುತ್ತೆ...? ನೀವೇ ಹೇಳಿಕೊಡ್ರಿಲ್ಲಾ...! ನಾನು ಇದ್ದದ್ದು ಇದ್ದ ಹಂಗೇ ಹೇಳೊ ಹಳೇ ಕಾಲದ ರೀತಿ ಮನುಷ್ಯ... ನೀವು ಹಾಗಿಲ್ರಿ... ಮನಸ್ಸಿನಾಗ ಏನೊ ಇಟ್‌ಕೊಂಡು, ಮ್ಯಾಲೆ ಯಾನೊ ಬ್ಯಾರೆನೇ ಮಾತಾಡ್ಲಿಕ್ಕೆ ಹತ್ತೀರ... ನೀವು ಮನಸ್ಸಿನೊಳಗ ಇಟ್ಟಿರಾದನ್ನ ನನ್ನ ಬಳಿ ಯಾಕೆ ಹೇಳವಲ್ರಿ...?'

'ಹೇಳೋಕೆ ಏನಿದೆ...? ಶಿವಣ್ಣ... ನಾನಿನ್ನು ಹೋಗ್ತೀನಪ್ಪಾ... ನಡ್ಯೋಕೆ ಸುಸ್ತು.'

'ಜರಾ ತಡೀರಿ... ನನ್ನ ಮನೀ ತನಕ ಬರ್ಬೇಡ್ರಿ... ಅಗೊ... ಆ ಕಲ್ಲು ಬಂಡೆ ಕಾಣ್ತದಲ್ಲ... ರಸ್ತೆ ಆಚೆಬದಿ... ಅದ್ರ ಮೇಲೆ ಕೂರ್ರಿ... ನೀವು ಈ ದಿನ ನನ್ನ ಬಳಿ ಈಗ್ಲೇ ಮಾತಾಡ್ಲಿಕ್ಕೇ ಬೇಕ್ರಿ...' ಎನ್ನುತ್ತಾ ಆ ರಾಜ ಬೀದಿಯಂತಿದ್ದ ಮೈಸೂರಿನ ದೊಡ್ಡ ರಸ್ತೆ ಆಚೆಗೆ ಇದ್ದ ಹಂಡೆಗಾತ್ರದ ಬಂಡೆ ಕಲ್ಲಿನ ಬಳಿ ಹೊರಟುಬಿಟ್ಟ ಶಿವಣ್ಣ 'ಬರ್ರೀ... ಇಲ್ಲಿ ಕುಂದ್ರಿ...' ಎಂದ.

ಗೋಗರೆವ ದನಿಯಲ್ಲಿ ಪ್ರಸಾದ ಹೇಳಿದ, 'ಬಲವಂತ ಮಾಡಬೇಡ್ರಿ ಶಿವಣ್ಣ'

'ನಿಮ್ಮ ಮನಸಿನಾಗ ಏನೈತಿ...? ನಾನು ತಿಳಿಲೇಬೇಕ್ರಿ...' ಎನ್ನುತ್ತಾ ಪ್ರಸಾದನ ಮುಖವನ್ನು ತೀಕ್ಷ್ಣವಾಗಿ ನೋಡುತ್ತಾ ಹೇಳಿದ, 'ನೋಡ್ರಿ ಪ್ರಸಾದಪ್ಪ, ಹೊರಗೆ ಕಾಣೋ ಬ್ಯಾನೆಯ ಬೇರು ಮನಸ್ಸಿನಾಗೇ ಇರ್ತದೆ... ನಿಮಗೆ ಯಾವ ಅಂಟುರೋಗನೂ ಇಲ್ಲ... ಇಲ್ಲವೇ ನಾಲ್ಕಾರು ದಿನ ಇದ್ದು ಹೋಗುವ ಯಾವ ನೆಗಡಿ, ಹೊಟ್ಟೆನೋವೂ ಇಲ್ಲ... ಅಂದ ಮೇಲೆ ನಿಮ್ಮ ಮನಸ್ಸಿನಾಗ... ಅದ್ಯಾವುದೊ ಚಿಂತೆ ಬೀಜ ಬೆಳೀತಿದೆ... ನೋಡ್ರಿ, ವೈದ್ಯರ ಸಮೀಪದಾಗ ಮನಸ್ಸಿನಾಗ ಇರೂದೆಲ್ಲಾ ಬಿಚ್ಚಿಟ್ಟು ಬಿಡಬ್ಯಾಕ್ರಿ... ಆಗ ಚಿಕಿತ್ಸಿ ಮಾಡಾದು ಸುಲೂಬ ಆಗ್ತೈತಿ... ನಿಮ್ಮ ಮನಸ್ಸಿಗೆ ಏನೂ ಆಘಾತ ಆಗ್ಲಿಕ್ ಹತ್ತದ ಅಂಬೂದು ನನ್ನ ಸನಿಹ ಬಿಚ್ಚಿಬಿಡ್ರಪ್ಪಾ...!'

'ನನ್ನ ವೈದ್ಯ ನೀವಲ್ಲಪ್ಪಾ... ನನ್ನ ವೈದ್ಯನಾರಾಯಣ...! ದೇವ್ರು. ನನಗೆ ಏನೇನು ಔಷಧಿ ಕೊಡ್ತಾನೊ ಅಷ್ಟೇ ಕೊಡ್ತಾನೆ... ಅವ್ನು ಕಹಿ ಕೊಟ್ರೆ, ಅದನ್ನೂ ನುಂಗ್ತೀನಿ. ಅದಕ್ಕೆ ತಯಾರಾಗಿದೀನಿ... ಶಿವಣ್ಣ, ಇನ್ನು ನಾನು ಹೋಗ್ಲೇಬೇಕು... ಹೋಗ್‌ತೀನಿ' ಎಂದು ಕ್ಷಣವೂ ನಿಲ್ಲದೆ ಪ್ರಸಾದ ಹೊರಟುಬಿಟ್ಟ.

ಪ್ರಸಾದನ ಹಿಂಬದಿಯನ್ನೇ ನೋಡುತ್ತ ಶಿವಣ್ಣ ಹುಸಿನಗೆ ನಕ್ಕ,

'ಈ ಮನುಷ್ಯನನ್ನ ಸೊಲ್ಪವಾದ್ರೂ ತಿಳ್ಕೋ ಹಂಗಾತು. ಇನ್ನಾ ತಿಳ್ಯಾಕೆ ವ್ಯಾಳೆ ಐತಿ... ಅವ್ನ ಎದೀ ಒಳಗೆ ಏನೇ ಮುಚ್ಚಿಟ್ಟುಕೊಂಡ್ರೂ ನಾನು ಅದನ್ನ ಹೊರಕ್ಕೆ ಎಳೀತೀನಿ...!' ಅವನಿಗೆ ಪ್ರಸಾದನ ಒಳಗು ತಿಳಿದುಬಿಟ್ಟಿತ್ತೇನೊ; ಪಾಪೂನ ತಂದೆ ಈ ಪ್ರಸಾದಪ್ಪನೇ ಎಂದು ಅವನು ತೊಂಬತ್ತೊಂಬತ್ತು ಪಾಲು ಸರಿಯಾಗಿಯೇ ಊಹಿಸಿಬಿಟ್ಟಿದ್ದ. ಆದರೆ ಅದನ್ನು ಬಾಯಲ್ಲಿ ತೋರ್ಪಡಿಸಿಕೊಳ್ಳುವ ಬದಲಾಗಿ ಆಗಾಗ್ಗೆ ಕಣ್ಣಿನಲ್ಲೇ ಉಗುಳುತ್ತಿದ್ದ!

ಇಬ್ಬರ ಸ್ನೇಹ ಈಗ ಬೇರೆ ಬೇರೆ ಹಾದಿ ಹಿಡಿಯಿತು.

ಪ್ರಸಾದನಿಗೆ ಈ ಶಿವಣ್ಣ ತನ್ನ ಅಂತರಂಗಕ್ಕೆ ಲಗ್ಗೆ ಹಾಕಲು ಯತ್ನಿಸಿದ್ದಾನೆ ಎಂಬುದರ ಸುಳಿವು ಸಿಕ್ಕಿ, ಅವನಿಂದ ಜಾರಿಕೊಂಡ. ಶಿವಣ್ಣ, ಪ್ರಸಾದನ ಮನದಲ್ಲಿ ಹುದುಗಿದ್ದ ಬೀಜದ ಮೊಳಕೆ ಮುಟ್ಟಿನೋಡಿ ಅಲ್ಪಸ್ವಲ್ಪ ಅದರ ಸ್ವರೂಪ ಅರಿತಂತೆ ಭಾವಿಸಿಕೊಂಡ.

ಪ್ರಸಾದ ಮನೆಗೆ ಬಂದವನೇ ತನ್ನ ಕೋಣೆಯಲ್ಲಿ ಇಟ್ಟಿದ್ದ ಬೆತ್ತದ ಆರಾಮ ಕುರ್ಚಿ ಮೇಲೆ ಕೂತು, ಪಕ್ಕದ ಪೆಟ್ಟಿಗೆ ಮೇಲೆ ಇಟ್ಟಿದ್ದ ಭಗವದ್ಗೀತೆ ಪುಸ್ತಕವನ್ನು ಕೈಗೆತ್ತಿಕೊಂಡು ತನ್ನ ನೋವಿಗೆ ಸಮಾಧಾನ ಕೊಡುವ ಅಧ್ಯಾಯವನ್ನು ಆರಿಸಿಕೊಂಡು ಓದುತ್ತಾ ಹೋದ. ಅರ್ಧಗಂಟೆ ಕಳೆಯುವುದರಲ್ಲಿ ಗಾಢ ನಿದ್ರೆಯಲ್ಲಿ ಮುಳುಗಿ ಹೋದ...

ಯಾರೋ ಅವನ ನಿದ್ದೆಯಲ್ಲಿ ಭುಜದ ಮೇಲೆ ಕೈ ಇಟ್ಟ ಹಾಗೆ ಭಾಸವಾಗಿ, ಕಣ್ಣುಬಿಟ್ಟಾಗ ಅಲ್ಲಿ ಶಿವಣ್ಣನಿದ್ದ. ಪ್ರಸಾದ ಬೆಚ್ಚಿದ. ಅವನ ಎದೆ ಮೇಲೆ ಸದಾ ಹರಡಿಕೊಂಡಿರುತ್ತಿದ್ದ ಅಂಗವಸ್ತ್ರ ಸರಿದು ಹೋದದ್ದನ್ನು ಮೊದಲು ಸರಿಪಡಿಸಿಕೊಳ್ಳುತ್ತಿದ್ದಾಗ, ಶಿವಣ್ಣ ಅವನ ತೆರೆದುಕೊಂಡ ಎದೆಭಾಗ ಕಂಡು ಮುಗುಳ್ನಕ್ಕನೆಂದು ಪ್ರಸಾದ ಅಂದುಕೊಂಡ. ಪ್ರಸಾದನಿಗೆ ಮನಸ್ಸು ಹುಳ್ಳಗಾಯಿತು. ಶಿವಣ್ಣ ಕಹಿಯಾಗಿ ನಗು ಲೇಪಿಸಿಕೊಂಡೇ ಹೇಳುತ್ತಿದ್ದ, 'ಸಂಜೆ ಆತು. ಇನ್ನೂ ಮಲ್ಗಿದ್ದೀರಿ ಯಾಕಪ್ಪ ಪ್ರಸಾದಪ್ಪಾ... ಏಳಿ... ನಾನು ಈಗ್ತಾನೇ ಗುಡಿಯಿಂದ ಬಂದೆ.. ಗುಡಿಗೆ ಹಾಲ್ಮಡ್ಡಿ, ಸಾಂಬ್ರಾಣಿ ಬೇಕಿತ್ತಂತೆ. ನಿಮ್ಮ ಅಪ್ಪಾವ್ರು ಹೇಳಿದ್ರು... ಹೆಂಗೂ ಗ್ರಂಥಿಗೆ ಅಂಗ್ಡಿಗೆ ಬೇರು, ನಾರು, ಭಸ್ಮ ತರೋಕೆ ಹೋಗಿದ್ನಿ... ಹಂಗೇ ಅವನ್ನೂ ತಂದು ಗುಡಿಯಾಗೆ ನಿಮ್ಮ ತಂದಿಗೆ ಕೊಟ್ಟುಬಂದಿ... ನಿಮ್ಮ ಅಪ್ಪಾವ್ರು... ನಿಮ್ಮನ್ನ ಅರ್ಜಂಟಿನಾಗೆ ಗುಡಿಗೆ ಬರಲು ಹೇಳಿದ್ರು ಅದಕ್ಕೇ ಬಂದು ನಿಮ್ಮ ಎಬ್ಬಿಸ್ದೆ.' ಪ್ರಸಾದ ಮೈ ತುಂಬ ತನ್ನ ಉತ್ತರೀಯ ಹೊದ್ದುಕೊಂಡು ಎದ್ದುನಿಂತ.

**11**

ಈಚೆಗೆ ತಾಯಿಯನ್ನು ಕಳೆದುಕೊಂಡಿದ್ದ ಪ್ರಸಾದ ದಿನ ದಿನಕ್ಕೆ ಇನ್ನೂ ದುರ್ಬಲನಾಗತೊಡಗಿದ್ದ. ಶಿವಣ್ಣ ಅವನಿಗೆ ಆರೋಗ್ಯದ ಬಗ್ಗೆ ಪದೇ ಪದೇ ಎಚ್ಚರಿಕೆ ಕೊಡುತ್ತಿದ್ದ. ಪ್ರಸಾದ ಡಾಕ್ಟರಿಗೆ ಹೋಗಿ ತೋರಿಸದೆ, ಶಿವಣ್ಣನ ಔಷಧಿಗಾಗಿ ಉದಾಸೀನನಾಗಿ ಒಪ್ಪಿಕೊಂಡಿದ್ದ. ಶಿವಣ್ಣ 'ಬ್ಯಾಡ್ರಿಯಪ್ಪಾ, ಬಾಳ ಶೀತ ಆಗ್ತೈತಿ. ದಾಕ್ತರ ಸನಿಹ ಹೇಗೋದೇ ಸೈ... ಊರ್ಗೆಲ್ಲಾ ಉಪದೇಶ ಕೊಡೊ ನೀವು, ನಿಮ್ಮ ನಿಮ್ಮ ಬಗ್ಗೇನೇ ಚಿಂತಿ ಮಾಡವಲ್ಲರಿ... ಯಾಕಾ...?' ಎಂದು ಹೇಳಿದಾಗ ಅವನ ಮಾತಿನಲ್ಲಿ ಗೂಢಾರ್ಥ ಇದ್ದು, ನಂಜು ತುಂಬಿದೆ ಎನಿಸಿತು ಪ್ರಸಾದನಿಗೆ. ಶಿವಣ್ಣನ ಬಾಗುತ್ತಿರುವ ಬೆನ್ನು, ಅವನ ಟೊಪ್ಪಿಗೆ, ಅವನ ಗಂಜಿ ಬನಿಯನ್ನು, ಕಚ್ಚೆ ಪಂಚೆ ಎಲ್ಲವೂ ಹೇವರಿಕೆ ಬರಿಸಿತು!

ಶಿವಣ್ಣ, ಇವನನ್ನು ನೆಮ್ಮದಿಯಾಗಿ ಒಂಟಿಯಾಗಿರಲು ಬಿಡುತ್ತಿರಲಿಲ್ಲ. ಕಂಡಲ್ಲಿ ಅಂಟಿಕೊಳ್ಳುತ್ತಿದ್ದ. ಪ್ರಸಾದ ಪ್ರವಚನ ಮಾಡುವಾಗಲೂ ಮುಂದಿನ

## ಪ್ರಭುತ್ವ

ಯಥಾ ರಾಜಾ ತಥಾ ಪ್ರಜಾ
ಅದು ರಾಜಪ್ರಭುತ್ವ,
ಯಥಾ ಪ್ರಜಾ ತಥಾ ರಾಜಾ
ಇದು ಪ್ರಜಾಪ್ರಭುತ್ವ

★ ಬಿರ್ತಿ ಸುರೇಶ್



ವಿಜಯ